# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ.ಬಿ.ಕೆ.ಹರಿಪ್ರಸಾದ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **1168** |
| ಉತ್ತರಿಸಬೇಕಾದ ದಿನಾಂಕ | : | 30.09.2020 |
| ಉತ್ತರಿಸಬೇಕಾದ ಸಚಿವರು | : | ವಸತಿ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ನಿವೇಶನರಹಿತರು ಹಾಗೂ ವಸತಿರಹಿತರು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ.<br><br>2018-19 ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಮಾರ್ಗಸೂಚಿಯ ಪ್ರಕಾರ ರಾಜ್ಯಾದ್ಯಂತ ನಿವೇಶನ ರಹಿತರು ಮತ್ತು ವಸತಿ ರಹಿತರನ್ನು ಗುರುತಿಸಲಾಗಿದ್ದು, ಸದರಿ ಸಮೀಕ್ಷೆ ಪ್ರಕಾರ ಗ್ರಾಮೀಣ ಪ್ರದೇಶಗಳಲ್ಲಿ 709960 ನಿವೇಶನ ರಹಿತರು ಮತ್ತು 1892825 ವಸತಿ ರಹಿತರು ಕಂಡು ಬಂದಿರುತ್ತಾರೆ.<br><br>2016-17 ಮತ್ತು 2017-18 ನೇ ಸಾಲಿನಲ್ಲಿ ರಾಜ್ಯಾದ್ಯಂತ ನಗರ ಪ್ರದೇಶಗಳಲ್ಲಿ ಬೇಡಿಕೆ ಸಮೀಕ್ಷೆ ನಡೆಸಲಾಗಿದ್ದು, ಆ ಪ್ರಕಾರ ಒಟ್ಟು 1080327 ನಿವೇಶನ ರಹಿತರು ಮತ್ತು 337354 ವಸತಿ ರಹಿತರಿರುವುದು ಕಂಡು ಬಂದಿದೆ. |
| (ಆ) | ಹಾಗಿದ್ದಲ್ಲಿ. ನಿವೇಶನ ಹಾಗೂ ವಸತಿ ರಹಿತರ ಸಂಖ್ಯೆ ಎಷ್ಟು; | |
| (ಇ) | ನಿವೇಶನ ರಹಿತರಿಗೆ ಭೂಮಿ ಒದಗಿಸುವ ಹಾಗೂ ವಸತಿ ರಹಿತರಿಗೆ ಮನೆ ಒದಗಿಸುವ ಉದ್ದೇಶ ಸರ್ಕಾರಕ್ಕಿದೆಯೆ; | ಹೌದು.<br><br>ನಿವೇಶನ ರಹಿತರಿಗೆ ನಿವೇಶನ ಒದಗಿಸಲು ಸರ್ಕಾರವು ಗ್ರಾಮೀಣ ಪ್ರದೇಶದಲ್ಲಿ ಗ್ರಾಮೀಣ ನಿವೇಶನ ಮತ್ತು ನಗರ ಪ್ರದೇಶದಲ್ಲಿ ವಾಜಪೇಯಿ ನಗರ ನಿವೇಶನ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದ್ದು, ಈ ಯೋಜನೆಗಳಡಿ ನಿವೇಶನ ಹಂಚಿಕೆ ಮಾಡಲು ಸರ್ಕಾರಿ ಜಮೀನಿಗೆ ಪ್ರಥಮ ಆದ್ಯತೆ ನೀಡಲಾಗಿದೆ. ಸರ್ಕಾರಿ ಜಮೀನು ಲಭ್ಯವಿಲ್ಲದ ಕಡೆಗಳಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಜಿಲ್ಲಾ ಜಮೀನು ಖರೀದಿ ಸಮಿತಿ ಮೂಲಕ ಖಾಸಗಿ ಜಮೀನನ್ನು ಭೂಮಾಲೀಕರ ಸಹಮತಿದೊಂದಿಗೆ ಖರೀದಿಸಲು ಕ್ರಮ ವಹಿಸಲಾಗುತ್ತಿದೆ.<br><br>ಸರ್ಕಾರದ ಆದೇಶ ಸಂಖ್ಯೆ : ವಇ 33 ಹೆಚ್ಎಹೆಚ್ 2016(ಭಾ-2), ದಿನಾಂಕ :12.07.2016 ರಲ್ಲಿ ಜಮೀನು ಖರೀದಿ ದರವನ್ನು ಈ ಕೆಳಕಂಡಂತೆ ನಿಗದಿಪಡಿಸಲಾಗಿದೆ. |
| ಈ | ಹಾಗಿದ್ದಲ್ಲಿ, ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ; ಮಂಜೂರು ಮಾಡಲಾಗುವುದು ಯಾವಾಗ? | |

| ಕ್ರ. ಸಂ. | ಪ್ರದೇಶ | ನಿಗದಿಪಡಿಸಲಾದ ಗರಿಷ್ಠ ದರ (ರೂ.ಲಕ್ಷಗಳಲ್ಲಿ) |
|---|---|---|
| 1 | ಗ್ರಾಮೀಣ ಪ್ರದೇಶ | 9.00 |
| 2 | ಪಟ್ಟಣ ಪಂಚಾಯಿತಿ | 12.00 |
| 3 | ಪುರಸಭೆ | 15.00 |
| 4 | ನಗರಸಭೆ | 22.50 |
| 5 | ಮಹಾನಗರ ಪಾಲಿಕೆ | 37.50 |
| 6 | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | 75.00 |

ರಾಜ್ಯಾದ್ಯಂತ ನಿವೇಶನ ಹಂಚಿಕೆಗೆ ಪ್ರಸ್ತುತ ಗ್ರಾಮೀಣ

| | | |
|---|---|---|
| | | ಪ್ರದೇಶದಲ್ಲಿ 3065 ಎಕರೆ ಮತ್ತು ನಗರ ಪ್ರದೇಶದಲ್ಲಿ 3255 ಎಕರೆ ಲಭ್ಯವಿದ್ದು, ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ ಒಟ್ಟು 3814 ಎಕರೆ ಜಮೀನನ್ನು ಗುರುತಿಸಲಾಗಿದ್ದು, ಜಮೀನನ್ನು ಗುರುತಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ.<br><br>ನಿವೇಶನ ಹಂಚಿಕೆಗೆ ಯಾವುದೇ ಕಾಲಮಿತಿ ಇರುವುದಿಲ್ಲ. ನಿವೇಶನ ರಹಿತರ ಸಂಖ್ಯೆಗೆ ಅನುಗುಣವಾಗಿ ನಿವೇಶನಗಳನ್ನು ಹಂಚಿಕೆ ಮಾಡಲು ಮೇಲ್ಕಂಡ ವಿಧಾನಗಳ ಮೂಲಕ ಮಂಜೂರಾದ/ ಖರೀದಿಸಲಾದ ಖಾಸಗಿ ಜಮೀನನ್ನು ಬಳಸಿ ಕೊಂಡು ಹಂತ ಹಂತವಾಗಿ ಅರ್ಹ ನಿವೇಶನ ರಹಿತರಿಗೆ ನಿವೇಶನ ಹಂಚಿಕೆ ಮಾಡಲು ಕ್ರಮ ವಹಿಸಲಾಗುತ್ತಿದೆ.<br><br>ನಿವೇಶನ ಹೊಂದಿದ್ದು, ಮನೆ ಇಲ್ಲದವರಿಗೆ ಸರ್ಕಾರವು ಪ್ರತಿ ವರ್ಷ ಆಯವ್ಯಯದಲ್ಲಿ ಒದಗಿಸುವ ಅನುದಾನಕ್ಕೆ ಅನುಗುಣವಾಗಿ ಗ್ರಾಮ ಪಂಚಾಯತಿವಾರು/ಸ್ಥಳೀಯ ಸಂಸ್ಥೆಗಳವಾರು ಮನೆಗಳ ಗುರಿ ನಿಗಧಿಪಡಿಸಿ, ಗ್ರಾಮೀಣ ಪ್ರದೇಶಗಳಲ್ಲಿ ಗ್ರಾಮ ಸಭೆ ಮೂಲಕ ಮತ್ತು ನಗರ ಪ್ರದೇಶಗಳಲ್ಲಿ ನಗರ ಆಶ್ರಯ ಸಮಿತಿ ಮೂಲಕ ಅರ್ಹ ವಸತಿ ರಹಿತರನ್ನು ನಿಯಮಾನುಸಾರ ಆಯ್ಕೆ ಮಾಡಿ ವಸತಿ ಸೌಕರ್ಯ ಕಲ್ಪಿಸಿ ಕೊಡಲಾಗುತ್ತಿದೆ. |

ಸಂಖ್ಯೆ :ವಇ 334 ಹೆಚ್‌ಎಎಂ 2020

(ವಿ. ಸೋಮಣ್ಣ)
ವಸತಿ ಸಚಿವರು.